| ಓ ಎಸ್ | 79/2013 | ಡಿ.ಡಬ್ಲ್ಯೂಃ 1 |
|---|---|---|

ಇಂದು ದಿಃ 06.02.2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ವಾದಿಗಳ ಪರ ಶ್ರೀ ಕೆ ಎಲ್ ಎಚ್ ವಕೀಲರಿಂದಃ-

ಆರ್ ಎ 14/2014 ರಲ್ಲಿ ತೀರ್ಪು ಈ ದಾವೆಯ ವಾದಿಗಳ ಪರವಾಗಿ ಆಗಿತ್ತು ಎಂದರೆ ಸರಿ. ಸದರಿ ತೀರ್ಪಿನ ವಿರುದ್ಧ ನಾನು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೆ. ಸ.ನಂ. 47 ಮತ್ತು 48 ಆಸ್ತಿಗಳಿಗೆ ಸಂಬಂಧಪಟ್ಟಂತೆ ಮೇಲ್ಮನವಿ ಸಲ್ಲಿಸಿದ್ದು ಬೇರೆ ಆಸ್ತಿಗಳಿಗೆ ಸಂಬಂಧಪಟ್ಟಂತೆ ಅಲ್ಲ ಎಂದರೆ ಸರಿ, ನಮಗೆ ಅಗತ್ಯ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸ.ನಂ. 47 ಮತ್ತು 48 ಕ್ಕೆ ಸಂಬಂಧಪಟ್ಟಂತೆ ಮಾತ್ರ ನಾವು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇವೆ ಎಂದರೆ ಸಾಕ್ಷಿಯು ಸ.ನಂ. 47 ಮತ್ತು 48 ಅಲ್ಲದೇ ಸ.ನಂ. 137 ಕ್ಕೆ ಮೇಲ್ಮನವಿ ಸಲ್ಲಿಸಿದ್ದೆವು ಎಂದು ನುಡಿಯುತ್ತಾರೆ. ಸ.ನಂ. 137 ರ ಖಾತೆ ವಾದಿಗಳ ಹೆಸರಿಗೆ ಆಗಿದೆ, ಅದು ಪಿತ್ರಾರ್ಜಿತ ಆಸ್ತಿ ಎಂದು ಸಾಕ್ಷಿ ನುಡಿಯುತ್ತಾರೆ.

ಸ.ನಂ. 47 ಮತ್ತು 48 ರ ಆಸ್ತಿಗಳು ನೀಲಕಂಠದೇವರ ಸ್ವಯಾರ್ಜಿತ ಆಸ್ತಿಗಳಾದ ಕಾರಣ ಅವರು ವಾದಿಗಳಿಗೆ ಸದರಿ ಆಸ್ತಿಗಳ ಬಗ್ಗೆ ದಿಃ02.12.1992 ರಲ್ಲಿ ವಿಲ್ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಒ ಎಸ್ 58/2004 ರಲ್ಲಿ ನ್ಯಾಯಾಲಯಕ್ಕೆ ವಾದಿಗಳು ಸದರಿ ವಿಲ್ ಅನ್ನು ಹಾಜರು ಮಾಡಿದ್ದಾರೆ ಎಂದರೆ ಸರಿ. ಆ ವಿಲ್ ಅನ್ನು ಯಾರು ಯಾರಿಗೆ ಬರೆದಿದ್ದರು ಎಂದರೇ ನಾನು ಅದನ್ನು ಓದಿಲ್ಲ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಂದೆಯ 2 ನೇ ಹೆಂಡತಿ ಕೆಂಪದೇವಮ್ಮ ಮತ್ತು ಅವರ ಮಕ್ಕಳು ನನ್ನ ತಂದೆಯ ಯೋಗಕ್ಷೇಮ ನೋಡಿಕೊಂಡ ಕಾರಣ ನನ್ನ ತಂದೆ ಅವರ ಹೆಸರಿಗೆ ವಿಲ್ ಬರೆದಿದ್ದರು ಎಂದರೆ ಸುಳ್ಳು. ಸದರಿ ವಿಲ್ ಬಗ್ಗೆ ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಲ್ ಅನ್ನು ಪ್ರಶ್ನಿಸಿ ನಾವು ಯಾವುದೇ ದಾವೆ ಸಲ್ಲಿಸಿಲ್ಲ.

ನಿ ಡಿ 72 ಮತ್ತು 73 ಒ ಎಸ್ 29/2015 ರಲ್ಲಿ ಆದ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲುಗಳಾಗಿದ್ದು ಸದರಿ ದಾವೆಗೂ ಈ ದಾವೆಯ ವಾದಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿ. ನಿ ಡಿ 76 ಒ ಎಸ್ 50/2016 ರ ಆದೇಶ ಹಾಳೆಯ ದೃಢೀಕೃತ ನಕಲಾಗಿದ್ದು ಸದರಿ ದಾವೆಯನ್ನು ಕೆಂಪದೇವಮ್ಮ ನಮ್ಮ ವಿರುದ್ಧ ಸಲ್ಲಿಸಿದ್ದರು ಎಂದರೆ ಹೌದು. ಸದರಿ ದಾವೆಯನ್ನು ಈ ದಾವೆಯ ವಾದಿಗಳು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದು ಸಲ್ಲಿಸಿದ್ದು ನಂತರ ಪ್ರತಿವಾದಿಗಳು ಸ್ವಾಧೀನಕ್ಕೆ ತೊಂದರೆ ಕೊಡದ ಕಾರಣ ವಾದಿಗಳು ದಾವೆಯನ್ನು ಹಿಂಪಡೆದುಕೊಂಡಿದ್ದರು ಎಂದರೆ ಹೌದು ಆದರೆ ವಾದಿಗಳು ಸ್ವಾಧೀನದಲ್ಲಿ ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ವಾದಿಗಳೇ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ.

ನಿ ಡಿ 81 ಹಕ್ಕುಖುಲಾಸೆ ಪತ್ರಕ್ಕೆ ವಾದಿಗಳ ಸಹಿ ಪಡೆದುಕೊಂಡಿಲ್ಲ ಎಂದರೆ ಸಹಿ ಹಾಕಿಲ್ಲ ನಮಗೂ ಅವರಿಗೂ ಸಂಬಂಧವಿಲ್ಲ, ಅವಶ್ಯಕತೆಯಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ವಾದಿಗಳಿಗೆ ಆಸ್ತಿಯಲ್ಲಿ ಭಾಗವಿದ್ದರೂ ನಾವು ಪ್ರತಿವಾದಿಗಳು ಶಾಮಿಲಾಗಿ ನಿ ಡಿ 81 ಹಕ್ಕು ಖುಲಾಸೆ ಪತ್ರವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ನಾವು ಪ್ರತಿವಾದಿಗಳು ಕೆಲವೊಂದು ಸ್ವತ್ತುಗಳನ್ನು ಮಾರಾಟ ಮಾಡಿದ್ದು ಸದರಿ ಕ್ರಯಪತ್ರದಲ್ಲಿ ವಾದಿಗಳ ಅಂದರೆ ಕೆಂಪದೇವಮ್ಮ ನಾಗಮ್ಮ ಮತ್ತು ಮಂಜುಳ ರವರ ಸಹಿ ಪಡೆದುಕೊಂಡಿರಲಿಲ್ಲ ಎಂದರೆ ಸರಿ. ಸಹಿ ತೆಗೆದುಕೊಂಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು ನಮಗೂ ಅವರಿಗೂ ಸಂಬಂಧವೇ ಇಲ್ಲದ ಕಾರಣ ಅವರ ಸಹಿ ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ವಾದಿಗಳಿಗೆ ಭಾಗವಿದ್ದರೂ ನಾವು ಪ್ರತಿವಾದಿಗಳು ಶಾಮಿಲಾಗಿ ವಾದಿಗಳ ಸಹಿ ಪಡೆದುಕೊಳ್ಳದೇ ಕೆಲವು ದಾವಾ ಅನುಸೂಚಿ ಸ್ವತ್ತುಗಳನ್ನು ಬೇರೆಯವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಇಲ್ಲ ಅವರಿಗೆ ಯಾವುದೇ ರೀತಿಯ ಭಾಗವಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ವಾದಿಗಳಿಗೆ ದಾವಾ ಆಸ್ತಿಗಳಲ್ಲಿ ಭಾಗವಿದ್ದರೂ ವಾದಿಗಳಿಗೆ ತಿಳಿಯದಂತೆ ನಾವು ಆಸ್ತಿಗಳನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ.

| ಓ ಎಸ್ | 79/2013 | ಡಿ.ಡಬ್ಲ್ಯೂ: 1 |
|---|---|---|

ಕೆಂಪದೇವಮ್ಮನ ಮಕ್ಕಳು ನಾಗಮ್ಮ ಮತ್ತು ಮಂಜುಳ ಎಂದರೆ ಸರಿ. ಕೆಂಪದೇವಮ್ಮನ ಗಂಡ ನೀಲಕಂಠದೇವರು ಎಂದರೆ ಸುಳ್ಳು. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದು ಅವುಗಳಲ್ಲಿ ವಾದಿಗಳಿಗೂ ಭಾಗ ಬರಬೇಕು ಎಂದರೆ ಇಲ್ಲ ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ.

ನನ್ನ ಲಿಖಿತ ಹೇಳಿಕೆಯಲ್ಲಿ ಬರೆದ ವಿಚಾರ ಗೊತ್ತಿದೆ. ನಿ ಡಿ 1 ರಿಂದ 86 ರ ಬಗ್ಗೆ ನನಗೆ ಮಾಹಿತಿ ಇಲ್ಲ ಹಾಗೂ ಅವುಗಳನ್ನು ನಾನು ನನ್ನ ಅವಶ್ಯಕತೆಗೋಸ್ಕರ ಸೃಷ್ಟಿಸಿದ್ದೇನೆ ಎಂದರೆ ಇಲ್ಲ ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ. ವಾದಿಗಳು ನನ್ನ ಚಿಕ್ಕಮ್ಮ ಮತ್ತು ಅವರ ಮಕ್ಕಳಾಗಿದ್ದರೂ ಅವರಿಗೆ ಭಾಗ ಕೊಡಬೇಕಾಗುತ್ತದೆ ಎಂಬ ಕಾರಣ ಕ್ಕೆ ನಮಗೂ ಅವರಿಗೂ ಸಂಬಂಧವಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.